**ಎಂ.ವಿ.ಸಿ ನಂ. 270/2022**
**ಆರ್ ಡಬ್ಲ್ಯೂ-2**

(ಇಂದು ದಿನಾಂಕಃ 03-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ವಿ.ಎಸ್.ಕೆ. ವಕೀಲರಿಂದ**

1. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಂತಹ ವಿಷಯಗಳು ಸರಿಯಾಗಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

- ವಿಮಾ ಪಾಲಿಸಿಯ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿ.ಆರ್-2 ಎಂದು, ಗುರುತಿಸಲಾಯಿತು.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ವಿ.ಎಸ್.ಕೆ. ವಕೀಲರಿಂದಃ**

ಅಪಘಾತ ಆದಾಗ ವಿಮೆ ಪಾಲಿಸಿ ಜಾರಿ ಯಲ್ಲಿತ್ತು ಎಂದರೆ ಸರಿ. FIR ನಲ್ಲಿ ನಮ್ಮ ಕಂಪನಿಯ ಟ್ರ್ಯಾಕ್ಟರ ನಂಬರ KA-38 T-4737 ಎಂದು ಇದೆ ಎಂದರೆ ಸರಿ. ಅದೇ ರೀತಿ ತನಿಖಾಧಿಕಾರಿ ಸರಿಯಾಗಿ ತನಿಖೆ ಮಾಡಿ ನಮ್ಮ ಟ್ರ್ಯಾಕ್ಟರ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನಾಗಲಿ, ಟ್ರ್ಯಾಕ್ಟರ ಮಾಲೀಕರಾಗಲಿ FIR ಮತ್ತು ಅಂತಿಮ ವರದಿಯನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಟ್ರ್ಯಾಕ್ಟರ ಚಾಲಕನ ವಿರುದ್ದ ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅಂತಿಮ ವರದಿಯಲ್ಲಿ RTO ನಿಯಮ ಉಲ್ಲಂಘನೆ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಾಗಿ ತನಿಖೆ ಮಾಡಿಲ್ಲ ಎಂದು ಹೇಳುತ್ತಾರೆ. ಟ್ರ್ಯಾಕ್ಟರ ಹಿಂಭಾಗ ಯಾವುದೇ ಮಸೀನ ಇರಲಿಲ್ಲ ಎಂದರೆ ಸರಿಯಲ್ಲ. ಬೋರ್ ವೆಲ್ ರಿಪೇರಿ ಕೆಲಸ ಕೃಷಿಯಲ್ಲಿ ಬರುತ್ತೆದೆ ಎಂದೆರೆ ಸರಿಯಲ್ಲ. ಇದರಲ್ಲಿ ಟ್ರಾಕ್ಟರ ನ್ನು ಯಾವತ್ತು ವಾಣಿಜ್ಯ ಉದ್ದೇಶಕ್ಕೆ ಬಳಸಿಲ್ಲ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರನ್ನು ಕೇವಲ ಕೃಷಿ ಉದ್ದೇಶಕ್ಕೆ ಬಳಸಿದ್ದು ಕಾರಣ ಯಾವುದೇ ವಿಮಾ ಕಂಡೀಷನ ಉಲ್ಲಂಘನೆ ಆಗಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಕ್ಟರನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿದ್ದಾರೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ಅಪಘಾತ Third Party Accident ಎಂದರೆ ಸರಿ. ಕಾರಣ ಮೃತ ಸಿರಾಜುದ್ದೀನ ರವರ ವಾರಸುದಾರರಿಗೆ ಪರಿಹಾರ ನೀಡಲು ನಮ್ಮ ಕಂಪನಿ ಜವಾಬ್ದಾರಿ ಎಂದರೆ ಸರಿಯಲ್ಲ. ಪರಿಹಾರ ನೀಡಲು ನಮ್ಮ ಕಂಪನಿ ಜವಾಬ್ದಾರಿ ಎಂದರೆ ಸರಿಯಲ್ಲ. ನಾನು ವಿಮಾ ಕಂಪನಿಯ

ನೌಕರನಾಗಿದ್ದು ಕಂಪನಿ ಪರಿಹಾರ ಕೊಡಬಾರದು ಆದರಿಂದ ಕಂಪನಿಗೆ ಹಣ ಉಳಿಸಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.